ಒಳಿತು ಮತ್ತು ಕೆಡುಕು

ಅಲ್ಲಾಹನಲ್ಲಿ ಆತ್ಮ ಸಮರ್ಪಣೆ ಒಂದೇ ಸನ್ಮಾರ್ಗಕ್ಕಿರುವ ದಾರಿ



ಖುರ್‌ಆನ್ ಕಲಿಯಿರಿ ಮತ್ತು ಪರೀಕ್ಷೆ ಬರೆಯಿರಿ ತಮ್ಮ ಸಾಮರ್ಥ್ಯವನ್ನು ತೋರಿಸಿರಿ.

ಒಳಿತು ಕೆಡುಕುಗಳ ಕುರಿತು...

ಎಲ್ಲ ಧರ್ಮಗಳಲ್ಲೂ ಇರುವ ಒಳಿತುಗಳೆಲ್ಲವನ್ನೂ ಕಲೆಹಾಕಿ ಒಂದು ಹೊಸ ಧರ್ಮವನ್ನು ನಿರ್ಮಿಸಿದರೆ ಹೇಗೆ?

ಹೀಗೊಂದು ಆಲೋಚನೆಯುಂಟಾಗಿದ್ದೇ ತಡ! ಅಕ್ಬರ್ ಬಾದಶಹ ತನ್ನ ಆಸ್ಥಾನ ಪಂಡಿತರ ಸಭೆ ಕರೆದು ಎಲ್ಲ ಧರ್ಮಗಳಲ್ಲೂ ಇರುವ ಒಳಿತುಗಳೆಲ್ಲವನ್ನೂ ಕಲೆಹಾಕಲು ಆದೇಶ ನೀಡಿದನಂತೆ! ಹೀಗೆ ಕಲೆಹಾಕಲಾದ ಒಳಿತುಗಳ ಧರ್ಮಕ್ಕೆ ಆತ 'ದೀನೆ ಇಲಾಹಿ' ಎಂದು ಹೆಸರಿಟ್ಟನಂತೆ! ದೀನೆ ಇಲಾಹಿ ಎಂದರೆ ಪರ್ಶಿಯನ್ ಭಾಷೆಯಲ್ಲಿ ದೈವಿಕ ಧರ್ಮ ಎಂದರ್ಥ. ತಾನು ಸ್ವತಃರಚಿಸಿದ ಹೊಸ ಧರ್ಮಕ್ಕೆ 'ದೈವಿಕ ಧರ್ಮ' ಎಂದು ಹೆಸರಿಸಿದ ಅಕ್ಬರ್ ಬಾದಶಹನ ಮೂಢತನವನ್ನು ಕ್ಷಣ ಕಾಲ ಮರೆಯೋಣ.

ಇಲ್ಲಿ ನಾವು ಚಿಂತಿಸಬೇಕಾದುದೇನೆಂದರೆ ಮಾನವ ಕುಲಕ್ಕೆ ಒಳಿತಾಗಿರುವುದು ಯಾವುದು? ಕೆಡುಕಾಗಿರುವುದು ಯಾವುದು? ಯಾವುದನ್ನು ಮಾಡಿದರೆ ಅವರಿಗೆ ಶಾಶ್ವತ ಲಾಭವುಂಟಾಗುವುದು ಮತ್ತು ಯಾವುದನ್ನು ಮಾಡಿದರೆ ಅವರು ಶಾಶ್ವತ ನಷ್ಟವನ್ನು ಅನುಭವಿಸಬೇಕಾಗಿ ಬರುವುದು ಎಂಬುದನ್ನು ಸ್ವತಃ ತೀರ್ಮಾನಿಸಲು ಮನುಷ್ಯನಿಗೆ ಸಾಧ್ಯವೇ?

ಮಾನವ ಕುಲವೆಂದರೆ ಅದು ಒಂದು ಮನೆಯೊಳಗೆ ವಾಸವಾಗಿರುವ ನಾಲ್ಕು ಗಂಡು ಮತ್ತು ಮೂರು ಹೆಣ್ಣು ಮಕ್ಕಳು ಮಾತ್ರವಾಗಿದ್ದರೆ ಆ ಮಕ್ಕಳಿಗೆ ಒಳಿತಾಗಿರುವುದು ಯಾವುದು ಮತ್ತು ಕೆಡುಕಾಗಿರುವುದು ಯಾವುದು ಎಂದು ನಿರ್ಧರಿಸಬಹುದಾಗಿತ್ತು! ಆದರೂ ಆ ಒಳಿತು ಕೆಡುಕುಗಳ ಪಟ್ಟಿ ನೂರು ಶೇಕಡಾ ಪ್ರಮಾದಮುಕ್ತವೆಂದು ವಾದಿಸಲು ಸಾಧ್ಯವಾಗದು!

ಹೀಗಿರುವಾಗ ಈ ಬೃಹತ್ ಭೂಮಿಯಲ್ಲಿ ವಾಸವಾಗಿರುವ ಕೋಟ್ಯಂತರ ಜನರಿಗೆ, ಅವರ ದೇಶ, ಭಾಷೆ, ಸಂಸ್ಕೃತಿಗೆ ಅತೀತವಾಗಿ ಒಳಿತು ಕೆಡುಕುಗಳ ಪಟ್ಟಿಯೊಂದನ್ನು ರಚಿಸಿಕೊಡಲು ಸಾಧ್ಯವೇ?

ನಾವು ಮಾರುಕಟ್ಟೆಯಿಂದ ಒಂದು ಚಿಕ್ಕ ಯಂತ್ರವನ್ನು ಅಥವಾ ಉಪಕರಣವನ್ನು ಖರೀದಿಸುವಾಗ ಅದರೊಂದಿಗೆ ಒಂದು ಚಿಕ್ಕ ಪುಸ್ತಿಕೆ ಅಥವಾ ಕರಪತ್ರದಂತಿರುವ ವಸ್ತು ನಮ್ಮ ಕೈಸೇರುತ್ತದೆ. ಈ ಯಂತ್ರವನ್ನು ಅಥವಾ ಉಪಕರಣವನ್ನು ಹೇಗೆ ಬಳಸಬೇಕು, ಹೇಗೆ ಬಳಸಬಾರದು (do's & dont's), ಏನೆಲ್ಲ ಮುಂಜಾಗ್ರತೆಗಳನ್ನು ಕೈಗೊಂಡರೆ ಇದನ್ನು

ಅಮೇರಿಕನ್ನರ ಪಾಲಿಗೆ ಹೆಣ್ಣೊಬ್ಬಳು ಹೊಕ್ಕುಳವನ್ನು ಪ್ರದರ್ಶಿಸುವುದು ಕೆಡುಕಾಗಿದೆ. ಅವರು ಅದನ್ನು ಅಸಭ್ಯವಾಗಿ ಕಾಣುತ್ತಾರೆ. ಆದರೆ ಅದೇ ಸಮಯ ಹೆಣ್ಣು ತನ್ನ ಇತರ ಅಂಗಾಂಗಗಳನ್ನು ಪ್ರದರ್ಶಿಸುವುದನ್ನು ಅವರು ಅಸಭ್ಯವಾಗಿ ಕಾಣುವುದಿಲ್ಲ. ಆದರೆ ಭಾರತೀಯರು ಅದನ್ನು ಅಸಭ್ಯವೆನ್ನುತ್ತಾರೆ.

ಈಗ ಭಾರತೀಯರಿಗೂ ಅಮೇರಿಕನ್ನರಿಗೂ ಯಾವುದು ಸಭ್ಯ ಮತ್ತು ಯಾವುದು ಅಸಭ್ಯವೆಂದು ಹೇಳಿಕೊಡಬೇಕಾದವರು ಯಾರು? ಅದು ಭಾರತೀಯರು ಹೇಳಹೊರಟರೆ ಅಮೇರಿಕನ್ನರು ಒಪ್ಪಲಾರರು. ಅಮೇರಿಕನ್ನರು ಹೇಳಹೊರಟರೆ ಭಾರತೀಯರು ಒಪ್ಪಲಾರರು. ಇನ್ನು ಮೂರನೇ ಒಬ್ಬ ವ್ಯಕ್ತಿ ಹೇಳಬೇಕಾದರೆ ಅವನಲ್ಲೂ ಇವರಲ್ಲೊಬ್ಬರು ಅಸಭ್ಯವಾಗಿ ಕಾಣುವ ಸಂಪ್ರದಾಯವಿರಬಹುದು. ಆದ್ದರಿಂದ ಮನುಷ್ಯನಿಗೆ ಯಾವುದು ಒಳಿತು ಮತ್ತು ಯಾವುದು ಕೆಡುಕು ಎಂದು ನಿರ್ಧರಿಸಲು ಮನುಷ್ಯನಿಂದ ಸಾಧ್ಯವಿಲ್ಲ.

ಮುಂಗಾರು ಸುರಿಯಲು ಕಪ್ಪೆಗೆ ಮದುವೆ ಮಾಡುವುದು, ಹೊಳೆ ಉಕ್ಕಿ ಹರಿದರೆ ಬಾಗಿನಅರ್ಪಿಸುವುದು, ಕಪ್ಪುಬೆಕ್ಕು ಹಾದುಹೋದರೆ ಪ್ರಯಾಣವನ್ನು ಮೊಟಕುಗೊಳಿಸಿ ಮರಳುವುದು, ಗ್ರಹಗಳ ಗತಿಗಳನ್ನು ನೋಡಿ ತಮ್ಮ ಕಾರ್ಯಕಲಾಪಗಳನ್ನು ನಿರ್ಧರಿಸುವುದು ಇತ್ಯಾದಿ ಅನೇಕ ವಿಷಯಗಳನ್ನು ಕೆಲವು ಸಮಾಜಗಳು ಒಳಿತೆಂದು ನಂಬುತ್ತವೆ. ಇವು ಲಾಭ ತರುತ್ತದೆಂದೂ ಹಾನಿಯನ್ನು ತಡೆಗಟ್ಟುತದೆಂದೂ ಅವರು ಭಾವಿಸುತ್ತಾರೆ. ಆದರೆ ಇವೆಲ್ಲವೂ ಭೂಮಿಯಲ್ಲಿರುವ ಎಲ್ಲರ ವಿಚಾರದಲ್ಲೂ ಒಳಿತಾಗಿರಬೇಕೆಂದೇನಿಲ್ಲ. ಇವು ಅನಾಗರಿಕವೆಂದು ಪರಿಗಣಿಸುವವರೂ ಇಲ್ಲಿದ್ದಾರೆ. ಹಾಗೆಯೇ ನಿಷಿದ್ಧವೆಂದೂ ಪರಿಗಣಿಸುವವರೂ ಇದ್ದಾರೆ.

ಹೀಗೆ ಒಂದು ಸಮಾಜವು ಯಾವುದನ್ನು ಒಳಿತೆಂದು ನಂಬುತ್ತದೋ ಅದನ್ನು ಇನ್ನೊಂದು ಸಮಾಜ ಅಸಭ್ಯವಾಗಿ, ಅಥವಾ ಮೂಢನಂಬಿಕೆಯಾಗಿ ಕಾಣಬಹುದು. ಅಥವಾ ಒಂದು ಸಮಾಜ ಯಾವುದನ್ನು ಕೆಡುಕೆಂದು ಭಾವಿಸುತ್ತದೋ ಅದು ಇನ್ನೊಂದು ಸಮಾಜದ ಮೂಲಭೂತ ನಂಬಿಕೆಯಾಗಿರಬಹುದು.

ಆದ್ದರಿಂದ ಮನುಷ್ಯನಿಗೆ ಸಂಬಂಧಿಸಿದಂತೆ ಮೊತ್ತವಾಗಿ ಯಾವುದು ಒಳಿತು ಮತ್ತು ಯಾವುದು ಕೆಡುಕು ಎಂದು ನಿರ್ಧರಿಸುವುದು ಮನುಷ್ಯನಿಗೆ ಸಾಧ್ಯವಿಲ್ಲ. ಅದು ಸಾಧ್ಯವಿರುವುದು ಮನುಷ್ಯನನ್ನು ಸೃಷ್ಟಿಸಿದ ಅವನ ಸೃಷ್ಟಿಕರ್ತನಿಗೆ ಮಾತ್ರವಾಗಿದೆ.

ಒಳಿತು ಮತ್ತು ಕೆಡುಕುಗಳನ್ನು ನಿರ್ಧರಿಸುವುದರಲ್ಲಿ ಮನುಷ್ಯನು ದೈವಿಕ ಮಾರ್ಗದರ್ಶನವನ್ನು ಅವಲಂಬಿಸುವುದು ಕಡ್ಡಾಯವಾಗಿದೆ. ಆದರೆ ಆ ಮಾರ್ಗದರ್ಶನವು ನೂರು ಶೇಕಡ

ಹೆಚ್ಚು ಬಾಳುವಂತೆ ಮಾಡಲು ಸಾಧ್ಯ, ಅಕಸ್ಮಾತ್ ಇದು ಚಾಲೂ ಆಗದಿದ್ದರೆ ಏನನ್ನು ಪರೀಕ್ಷಿಸಬೇಕು (trouble shooting) ಇತ್ಯಾದಿ ಮಾಹಿತಿಗಳನ್ನು ಈ ಪುಸ್ತಿಕೆಯು ಹೊಂದಿರುತ್ತದೆ.

ಉಪಕರಣವನ್ನು ಖರೀದಿಸಿದ ತರುವಾಯ ನಾವು ಮೊಟ್ಟಮೊದಲು ಈ ಪುಸ್ತಿಕೆಯನ್ನು ಓದುತ್ತೇವೆ. ಈ ಉಪಕರಣವನ್ನು ಎಲ್ಲಿಡಬೇಕು? ಗೋಡೆಯಿಂದ ಎಷ್ಟು ದೂರದಲ್ಲಿಡಬೇಕು? ಎಷ್ಟು ವೋಲ್ಟ್ ವಿದ್ಯುತ್‌ನಲ್ಲಿ ಇದನ್ನು ಬಳಸಬಹುದು? ಇದರ ವೈರ್‌ಗಳನ್ನು ಎಲ್ಲಿ ಜೋಡಿಸಬೇಕು? ಇದನ್ನು ಕ್ಲೀನ್ ಮಾಡುವುದು ಹೇಗೆ? ಸೋಪು ಬಳಸಿ ಕ್ಲೀನ್ ಮಾಡಬಹುದೇ? ಇತ್ಯಾದಿಗಳೆಲ್ಲವನ್ನೂ ಆ ಪುಸ್ತಿಕೆಯಿಂದಲೇ ಕಲಿಯುತ್ತೇವೆ. ಸಂಶಯ ಬಂದರೆ ಆ ಉಪಕರಣದ ಅಧಿಕೃತ ಉತ್ಪಾದಕ ಅಥವಾ ಮಾರಾಟಗಾರನನ್ನು ಸಂಪರ್ಕಿಸುತ್ತೇವೆ. ಇದರ ಹೊರತು ನಮ್ಮ ಮನಸ್ಸಿಗೆ ತೋಚಿದಂತೆ ನಾವು ಆ ಉಪಕರಣದೊಂದಿಗೆ ವ್ಯವಹರಿಸುವುದಿಲ್ಲ.

ಒಂದು ಉಪಕರಣದ ಸಮಗ್ರ ಅರಿವು ಅದರ ಉತ್ಪಾದಕನಿಗೆ ಮಾತ್ರವಿದೆಯೆಂದು ಇದ–ರಿಂದ ಗ್ರಹಿಸಬಹುದು. ಇತರರಿಗೆ ಆ ಉಪಕರಣದ ಬಗ್ಗೆ ಏನಾದರೂ ತಿಳುವಳಿಕೆ ಸಿಗಬೇಕಾದರೆ ಅವನು ಒಂದೋ ಉತ್ಪಾದಕನಿಂದ ನೇರ ತರಬೇತಿ ಪಡೆದಿರಬೇಕು ಅಥವಾ ಉತ್ಪಾದಕ ನೀಡಿದ ಮಾಹಿತಿಯಂತೆ ಅದನ್ನು ಬಳಸಿರಬೇಕು. ಅನ್ಯಥಾ ಆ ಉಪಕರಣದ ಬಗ್ಗೆ ತಿಳಿಯಲು ಅವನಿಗೆ ಸಾಧ್ಯವಾಗದು.

ಹೀಗಿರುವಾಗ ಮನುಷ್ಯನೆಂಬ ಯಂತ್ರಕ್ಕೆ ಯಾವುದು ಒಳಿತು ಅಥವಾ ಯಾವುದು ಕೆಡುಕು ಎಂದು ನಿರ್ಧರಿಸುವ ಅರ್ಹತೆಯಿರುವುದು ಯಾರಿಗೆ?

ಇದನ್ನು ಇನ್ನೊಂದು ದೃಷ್ಟಿಕೋನದಿಂದ ವೀಕ್ಷಿಸೋಣ. ಈ ಭೂಮಿಯಲ್ಲಿರುವ ಮನುಷ್ಯರೆಲ್ಲರೂ ಒಂದೇ ದೇಶದಲ್ಲಿ ವಾಸಿಸುವವರಲ್ಲ. ಒಂದೇ ಭಾಷೆಯನ್ನು ಮಾತನಾಡುವವರೂ ಅಲ್ಲ. ತಮ್ಮ ದೇಶ, ಭಾಷೆ ಮತ್ತು ಭೌಗೋಳಿಕ ಸ್ಥಿತಿಗೆ ಅನುಗುಣವಾಗಿ ಜನರ ಸಂಸ್ಕೃತಿಗಳೂ ವಿಭಿನ್ನವಾಗಿವೆ.

ಉದಾಹರಣೆಗೆ ಭಾರತೀಯ ನಾರಿಯರು ಸೀರೆಯುಟ್ಟುಕೊಳ್ಳುವಾಗ ತಮ್ಮ ಹೊಕ್ಕುಳವನ್ನು ಪ್ರದರ್ಶಿಸುತ್ತಾರೆ. ಭಾರತೀಯರಿಗೆ ಸಂಬಂಧಿಸಿದಂತೆ ಇದೊಂದು ಕೆಡುಕಲ್ಲ. ಅವರು ಅದನ್ನು ಒಂದು ಕೆಡುಕಾಗಿ ಪರಿಗಣಿಸುವುದೂ ಇಲ್ಲ. ಅಸಭ್ಯವೆಂದು ಹೇಳುವುದೂ ಇಲ್ಲ. ಆದರೆ

ದೈವಿಕವಾಗಿರಬೇಕಾಗಿದೆ. ಉದಾಹರಣೆಗೆ ಬೈಬಲ್ ಮದ್ಯಪಾನವನ್ನು ವಿರೋಧಿಸುತ್ತದೆ. ಆದರೆ ನೋಹ ಪ್ರವಾದಿ ಪಾನಮತ್ತರಾಗಿ ಬೆತ್ತಲೆ ಬಿದ್ದಿದ್ದರೆಂದು (ಅಲ್ಲಾಹು ಕಾಪಾಡಲಿ) ಅದೇ ಬೈಬಲ್ ಹೇಳುತ್ತದೆ. ಯೇಸು ಔತಣಕೂಟವೊಂದರಲ್ಲಿ ನೀರನ್ನು ದ್ರಾಕ್ಷಾರಸವಾಗಿ ಮಾರ್ಪಡಿಸಿದ್ದನ್ನು ಯೇಸು ತೋರಿಸಿದ ಮೊಟ್ಟಮೊದಲ ಅದ್ಭುತಕಾರ್ಯವಾಗಿ ಬೈಬಲ್ ಎತ್ತಿ ಹೇಳುತ್ತದೆ. ಇನ್ನು ಭಾರತೀಯ ಪುರಾಣಗಳತ್ತ ಕಣ್ಣುಹಾಯಿಸಿದರೆ ಅದರಲ್ಲೂ ದೇವತೆಗಳು ಮದ್ಯಪಾನ ಮಾಡುವುದನ್ನು ಕಾಣಬಹುದಾಗಿದೆ. ಆದ್ದರಿಂದ ಮದ್ಯಪಾನ ಮನುಕುಲಕ್ಕೆ ಒಳಿತಾಗಿದೆಯೇ ಅಥವಾ ಕೆಡುಕಾಗಿದೆಯೇ ಎಂಬ ಬಗ್ಗೆ ಇವೊಂದೂ ಸ್ಪಷ್ಟವಾದ ಉತ್ತರವನ್ನು ನೀಡುವುದಿಲ್ಲ.

ಇನ್ನು ವ್ಯಭಿಚಾರದ ಕುರಿತು ಹೇಳುವುದಾದರೆ ಬೈಬಲ್ ಅದನ್ನು ವಿರೋಧಿಸುತ್ತದೆ. ಆದರೆ ಮನುಕುಲಕ್ಕೆ ಮಾರ್ಗದರ್ಶನ ನೀಡಲು ಆಗಮಿಸಿದ ಪ್ರವಾದಿಗಳನ್ನು ಅದೇ ಬೈಬಲ್ ವ್ಯಭಿಚಾರಿಗಳೆಂದು ಚಿತ್ರಿಸುತ್ತದೆ. (ಅಲ್ಲಾಹು ಕಾಪಾಡಲಿ). ಪುರಾಣಗಳಲ್ಲೂ ಸಹ ದೇವರುಗಳು ಅನ್ಯ ಸ್ತ್ರೀಯರೊಂದಿಗೆ ಸಂಬಂಧ ಹೊಂದಿರುವ ಕಥೆಗಳಿವೆ. ಹೀಗಿರುವಾಗ ವ್ಯಭಿಚಾರವು ಮನುಕುಲಕ್ಕೆ ಒಳಿತಾಗಿದೆಯೇ ಅಥವಾ ಕೆಡುಕಾಗಿದೆಯೇ ಎಂದು ಸ್ಪಷ್ಟವಾಗಿ ನಿರ್ಧರಿಸಲು ಈ ಗ್ರಂಥಗಳನ್ನು ಆಧಾರವಾಗಿಸುವುದು ಸಾಧ್ಯವಿಲ್ಲ.

ಆದರೆ ಇಸ್ಲಾಮ್ ಮನುಷ್ಯನ ಇಹಪರ ಒಳಿತಿಗೆ ಅನುಕೂಲಕರವಾಗಿರುವ ಎಲ್ಲವನ್ನೂ ತಿಳಿಸಿಕೊಟ್ಟಿದೆ. ಇಸ್ಲಾಮ್ ಆದೇಶಿಸಿದ ಒಂದು ಒಳಿತು ಒಳಿತಲ್ಲ, ಅದು ಕೆಡುಕಾಗಿದೆಯೆಂದು ಸಾಬೀತುಪಡಿಸಲು ಇಂದಿನವರೆಗೂ ಮನುಕುಲಕ್ಕೆ ಸಾಧ್ಯವಾಗಿಲ್ಲ. ಹಾಗೆಯೇ ಇಸ್ಲಾಮ್ ವಿರೋಧಿಸಿದ ಒಂದು ಕೆಡುಕು ಕೆಡುಕಲ್ಲ, ಅದು ಒಳಿತಾಗಿದೆಯೆಂದು ಸಾಬೀತುಪಡಿಸಲು ಮನುಕುಲಕ್ಕೆ ಇಂದಿನವರೆಗೂ ಸಾಧ್ಯವಾಗಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಇಸ್ಲಾಮ್ ಆದೇಶಿಸದ ಒಂದು ಒಳಿತು ಈ ಜಗತ್ತಿನಲ್ಲಿ ಅಸ್ತಿತ್ವದಲ್ಲಿಲ್ಲ. ಹಾಗೆಯೇ ಇಸ್ಲಾಮ್ ವಿರೋಧಿಸದ ಒಂದು ಕೆಡುಕು ಕೂಡ ಈ ಜಗತ್ತಿನಲ್ಲಿ ಅಸ್ತಿತ್ವದಲ್ಲಿಲ್ಲ.

ಇಸ್ಲಾಮ್ ಸೃಷ್ಟಿಕರ್ತನ ಧರ್ಮವಾಗಿದೆ. ಸೃಷ್ಟಿಗೆ ಯಾವುದು ಒಳಿತಾಗಿದೆ ಮತ್ತು ಯಾವುದು ಕೆಡುಕಾಗಿದೆ ಎಂದು ನಿರ್ಧರಿಸಬೇಕಾದವನು ಸ್ವತಃ ಸೃಷ್ಟಿಕರ್ತನೇ ಆಗಿರುವನು. ಅವನ ಹೊರತು ಅದನ್ನು ನಿರ್ಧರಿಸುವ ಅರ್ಹತೆ ಯಾರಿಗೂ ಇಲ್ಲ. ಹಾಗೇನಾದರೂ ಅವರು ನಿರ್ಧರಿಸಿದರೆ ಅದನ್ನು ಸಾರ್ವತ್ರಿಕವಾಗಿ ಪ್ರಾಯೋಗಿಕಗೊಳಿಸಲೂ ಸಾಧ್ಯವಿಲ್ಲ.

(ಸತ್ಯ ಸಾರತಿ ಮಾಸಿಕ 2011 ರ ಸಂಚಿಕೆ ಯಿಂದ)

LEARN THE QUR'AN

Qur'an Study & Learn Project by SKSM

ಲರ್ನದಿ ಖುರ್ ಆನ್

ಪರೀಕ್ಷೆಯಲ್ಲಿ ಪಾಲ್ಗೊಳ್ಳಿ

ಪವಿತ್ರ ಉಂರಾ ಪ್ರವಾಸಕ್ಕೆ ಅರ್ಹರಾಗಿರಿ.

SOUTH KARNATAKA SALAFI MOVEMENT (R)

عودة إلى الكتاب والسنة على منهج السلف الصالح

الحركة السلفية بجنوب كرناتكا (م)

SKSM

Gundmi Sastan